

# ಡಿಎನ್‌ಎ ಪರೀಕ್ಷೆಯಿಂದ ಕ್ಷಯ ಪತ್ತೆ ಹಚ್ಚಬಹುದು!

ಸೋಂಕು ತಗಲುವ ಮೂಲಕ ಹರಡುವ ರೋಗ ಕ್ಷಯ. ಕಫ, ಕೆಮ್ಮು, ಸಂಜೆಯ ವೇಳೆಗೆ ಜ್ವರ ಬರುವುದು, ತೂಕದಲ್ಲಿ ಗಣನೀಯವಾಗಿ ಇಳಿಕೆ, ರಕ್ತದಲ್ಲಿ ತೊಂದರೆ... ಇವೇ ಮುಂತಾದ ಸಾಮಾನ್ಯ ಲಕ್ಷಣಗಳನ್ನು ಹೊಂದಿರುವ ಕ್ಷಯ ವ್ಯಾಪಕವಾಗಿ ಹರಡುವ ಹಾಗೂ ಅತ್ಯಂತ ಹೆಚ್ಚು ಜನರನ್ನು ಬಲಿ ತೆಗೆದುಕೊಳ್ಳುವ ರೋಗ. ಒಮ್ಮೆ ಕ್ಷಯ ಬಂದರೆ ಇದು ಜೀವವನ್ನೇ ಹಿಂಡಿ ಹಿಪ್ಪೆ ಮಾಡಿ ಬಿಡುತ್ತದೆ. ಕ್ಷಯ ಆನುವಂಶೀಯವಾಗಿಯೂ ಬರುತ್ತದೆ.

ಸಾಮಾನ್ಯವಾಗಿ ಶ್ವಾಸಕೋಶದಿಂದ ಆರಂಭವಾಗುವ ಕ್ಷಯ, ಲಿಂಪ್‌ನೋಡ್ ಮೂಲಕ ಬೆನ್ನುಹುರಿ ತಲುಪುತ್ತದೆ. ಬೆನ್ನುಹುರಿಯಲ್ಲಿ ರಕ್ತಸಂಚಾರ ಹೆಚ್ಚು. ಅಲ್ಲಿಂದ ಕಿಡ್ನಿ ಸೇರಿದಂತೆ ಇತರ ನರವ್ಯೂಹಕ್ಕೂ ಹರಡಬಹುದು. ಹೀಗಾಗಿ ಕ್ಷಯ ಸೂಚಕ ಯಾವುದೇ ಲಕ್ಷಣಗಳು ಕಂಡುಬಂದರೂ ತಜ್ಞ ವೈದ್ಯರನ್ನು ಕೂಡಲೇ ಸಂಪರ್ಕಿಸಿ ಚಿಕಿತ್ಸೆ ಪಡೆದುಕೊಳ್ಳಬೇಕು.

### ಕ್ಷಯ ಪತ್ತೆಗೆ ಹೊಸ ಸಾಧನ

ವೈದ್ಯಕೀಯ ತಂತ್ರಜ್ಞಾನದಲ್ಲಿ ಗಣನೀಯವಾಗಿ ಮುಂದುವರಿದಿದೆ. ಹೊಸ ಹೊಸ ಸಾಧನಗಳು, ಪರೀಕ್ಷೆಗಳು, ನೋವು ನಿವಾರಕಗಳು ಬಂದಿದ್ದು, ರೋಗಪತ್ತೆಗೆ ಸರಳ ವಿಧಾನಗಳು ಚಾಲ್ತಿಗೆ ಬಂದಿವೆ. ಕ್ಷಯ ರೋಗ ಪತ್ತೆಗೂ ಹೊಸ ಸಾಧನ ಬಂದಿದೆ. ಇದೀಗ ಡಿಎನ್‌ಎ ಪರೀಕ್ಷೆಯ ಮೂಲಕ ಕ್ಷಯ ರೋಗವನ್ನು ಪತ್ತೆ ಹಚ್ಚಬಹುದು, ಈ ಹೊಸ ವಿಧಾನವನ್ನು ಆಮೆರಿಕ ಮೂಲದ ಸಂಸ್ಥೆ ಮೆಡ್‌ಜಿನೋಮ್ (Medgenome) ಲ್ಯಾಬ್ಸ್ ವೈದ್ಯಲೋಕಕ್ಕೆ ಪರಿಚಯಿಸಿದೆ. ಈ ಹೊಸ ವಿಧಾನದ 'ಸ್ಪಿಟ್ ಎಸ್‌ಇಕ್ಯೂ' ಪರೀಕ್ಷೆ ರೋಗಿಗೆ ಕ್ಷಯ ಬಂದು ಮೂರು ದಿನಗಳ ಒಳಗಾಗಿ ಆತನಿಗೆ ಕ್ಷಯ ಇದೆಯೋ ಇಲ್ಲವೋ ಎಂಬುದನ್ನು ನಿಖರವಾಗಿ ತಿಳಿಸುತ್ತದೆ. ಆದರೆ ಈ ಹಿಂದೆ ಕ್ಷಯ ಪತ್ತೆಗೆ ಇದ್ದ ಸಾಕಷ್ಟು ಪರೀಕ್ಷೆಗಳು ರೋಗಿಯ ಕ್ಷಯ ಪತ್ತೆಗೆ ಕನಿಷ್ಠ 10 ದಿನಗಳಾದರೂ ತೆಗೆದುಕೊಳ್ಳುತ್ತಿತ್ತು. ಈ ನಿಟ್ಟಿನಲ್ಲಿ ಹೊಸ ಡಿಎನ್‌ಎ

